# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಎಂ.ಎ ಗೋಪಾಲಸ್ವಾಮಿ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **499 (504)** |
| ಉತ್ತರಿಸಬೇಕಾದ ದಿನಾಂಕ | : | **10.03.2020** |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2018-19 ಹಾಗೂ 2019-20 ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಎಷ್ಟು ರೈತರ ಸಾಲ ಮನ್ನಾ ಮಾಡಲಾಗಿದೆ; (ಗ್ರಾಮ, ಹೋಬಳಿ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)</td><td>2018-19 ಹಾಗೂ 2019-20 ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಇಲ್ಲಿಯವರೆಗೆ 1,11,498 ರೈತರ ಸಾಲ ಮನ್ನಾ ಮಾಡಲಾಗಿದೆ. ಗ್ರಾಮ, ಹೋಬಳಿ ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.</td></tr>
<tr><td>ಆ)</td><td>2018-19 ಹಾಗೂ 2019-20ನೇ ಸಾಲಿನ ಹಾಸನ ಜಿಲ್ಲೆಯ ವಿವಿಧ ಬ್ಯಾಂಕ್‌ಗಳಲ್ಲಿ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ, ಕೇಂದ್ರ ಸರ್ಕಾರದ ಬ್ಯಾಂಕ್, ಸಹಕಾರಿ ಬ್ಯಾಂಕ್‌ಗಳಲ್ಲಿ ಎಷ್ಟು ರೈತರು ಎಷ್ಟು ಮೊತ್ತವನ್ನು ಬೆಳೆ ಸಾಲವಾಗಿ ಪಡೆದಿದ್ದಾರೆ; (ಪ್ರತಿ ರೈತ ಪಡೆದಿರುವ ಸಾಲದ ಮೊತ್ತ, ಅವರ ಹೆಸರು, ಗ್ರಾಮ, ಹೋಬಳಿ, ತಾಲ್ಲೂಕು ಮತ್ತು ಬ್ಯಾಂಕ್‌ನ ಸಂಪೂರ್ಣ ಮಾಹಿತಿ ನೀಡುವುದು)</td><td>ಹಾಸನ ಜಿಲ್ಲೆಯಲ್ಲಿ 2018-19 ಹಾಗೂ 2019-20 ರಲ್ಲಿ ರೈತರು ಸಹಕಾರಿ ಸಂಸ್ಥೆಗಳಲ್ಲಿ ಪಡೆದಿರುವ ಬೆಳೆ ಸಾಲದ ವರ್ಷವಾರು ಮಾಹಿತಿಯು ಈ ಕೆಳಕಂಡಂತಿದೆ.<br><br>(ರೂ. ಕೋಟಿಗಳಲ್ಲಿ)
<table>
<tr><th rowspan="2">ಕ್ರಸಂ</th><th rowspan="2">ವರ್ಷ</th><th colspan="2">ಸಹಕಾರಿ ಬ್ಯಾಂಕ್‌ಗಳಿಂದ</th></tr>
<tr><th>ಸಂಖ್ಯೆ</th><th>ಮೊತ್ತ</th></tr>
<tr><td>1</td><td>2018-19</td><td>65,639</td><td>292.20</td></tr>
<tr><td>2</td><td>2019-20</td><td>65,637</td><td>326.58</td></tr>
</table>
ಪ್ರತಿ ರೈತ ಪಡೆದಿರುವ ಸಾಲದ ಮೊತ್ತ, ಅವರ ಹೆಸರು, ಗ್ರಾಮ, ಹೋಬಳಿ, ತಾಲ್ಲೂಕು ಮತ್ತು ಬ್ಯಾಂಕ್‌ನ ಸಂಪೂರ್ಣ ಮಾಹಿತಿ ವಿವರವನ್ನು ಅನುಬಂಧ-2 ಮತ್ತು 2(ಎ) ರಲ್ಲಿ ಲಗತ್ತಿಸಿದೆ.</td></tr>
<tr><td>ಇ)</td><td>ಯಾವ ಯಾವ ಮಾನದಂಡದ ಆಧಾರದ ಮೇಲೆ ರೈತರ ಸಾಲ ಮನ್ನಾ ಮಾಡಲಾಗಿದೆ ಹಾಗೂ ಯಾವ ಯಾವ ಬೆಳೆಗಳಿಗೆ ಎಷ್ಟು ಸಾಲ ಮನ್ನಾ ಮಾಡಲಾಗಿದೆ? (ವಿವರ ನೀಡುವುದು)</td><td>ಸಹಕಾರ ಸಂಘಗಳ ಸಾಲ ಮನ್ನಾ ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿದೆ.<br>1. ದಿ:10.07.2018ಕ್ಕೆ ಸಹಕಾರ ಸಂಘಗಳಲ್ಲಿ ರೈತರು ಬೆಳೆ ಸಾಲದ ಹೊರಬಾಕಿಯನ್ನು ಹೊಂದಿರಬೇಕು. ಒಂದು ಕುಟುಂಬಕ್ಕೆ ಗರಿಷ್ಟ ರೂ.1.00 ಲಕ್ಷದವರೆವಿಗೆ ಮನ್ನಾ ದೊರೆಯುತ್ತದೆ.<br>2. ರೂ.20,000 ಹೆಚ್ಚಿನ ವೇತನ/ಪಿಂಚಣಿ ಪಡೆಯುವ ನೌಕರರಿಗೆ ಹಾಗೂ ಕಳೆದ ಮೂರು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಆದಾಯ ತೆರಿಗೆ ಪಾವತಿಸಿದಲ್ಲಿ ಈ ಯೋಜನೆ ಅನ್ವಯವಾಗುವುದಿಲ್ಲ.<br>3. ದಿ.10-7-2018 ಕ್ಕೆ ಹೊರಬಾಕಿ ಚಾಲ್ತಿ ಇದ್ದಲ್ಲಿ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ಗಡುವಿನ ದಿನಾಂಕದೊಳಗೆ ಮರುಪಾವತಿಸತಕ್ಕದ್ದು.</td></tr>
</table>

| | | |
|---|---|---|
| | | 4. ದಿ.10–7–2018 ಕ್ಕೆ ಹೊರಬಾಕಿ ಸುಸ್ತಿ ಇದ್ದಲ್ಲಿ ಸುಸ್ತಿ ಸಾಲದ ಮರುಪಾವತಿ ದಿನಾಂಕದವರೆಗಿನ ಸಂಪೂರ್ಣ ಬಡ್ಡಿಯನ್ನು ಹಾಗೂ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ದಿನಾಂಕ: 31.07.2019 ರೊಳಗೆ ಪಾವತಿಸತಕ್ಕದ್ದು.<br><br>ಮೇಲಿನ ಷರತ್ತುಗಳನ್ನು ಜಾರಿಗೊಳಿಸಲು ರೈತರು ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ತಮ್ಮ ಸ್ವಯಂ ದೃಡೀಕರಣ ಪತ್ರದೊಂದಿಗೆ ನೀಡಬೇಕಿರುತ್ತದೆ.<br>1. ಆಧಾರ್ ಕಾರ್ಡ್<br>2. ಆರ್‌ಟಿಸಿ<br>3. ರೇಷನ್ ಕಾರ್ಡ್<br><br>ರೈತರು ಯಾವುದೇ ತರಹದ ಬೆಳೆಗಳಿಗೆ ಪಡೆದ ಬೆಳೆ ಸಾಲಗಳಿಗೆ ಮಾತ್ರ ಈ ಯೋಜನೆ ಅನ್ವಯವಾಗಲಿದ್ದು, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ. |

**ಸಂಖ್ಯೆ: ಸಿಒ 107 ಸಿಎಲ್‌ಎಸ್ 2020**

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು